**ಸಿಸಿ ನಂಬರ್ಃ 378/2020**

**ಪಿಡಬ್ಲ್ಯೂಃ 01**

ದಿನಾಂಕಃ 20-10-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಎಮ್.ಆರ್ ವಕೀಲರಿಂದಃ**

ಆರೋಪಿತನ ಸಹೋದರ ವೆಂಕಟೇಶ ನನಗೆ 2014 ನೇ ಸಾಲಿನಿಂದ ಪರಿಚಯ ಅಂದರೆ ಸರಿ. ಶಹಪೂರು ತಾಲೂಕಿನ ಮದ್ರಿಗಿ ಗ್ರಾಮದಲ್ಲಿ ನಾನು ಜಮೀನು ಖರಿದಿ ಮಾಡಿರುವುದರಿಂದ ಆರೋಪಿತನ ಸಹೋದರ ಪರಿಚಯ. ನಮ್ಮ ಕುಟುಂಬದ ಜಮೀನುಗಳನ್ನು ಆರೋಪಿತನ ಸಹೋದರನಿಗೆ ಲಿಜಿಗೆ ಕೊಟ್ಟಿದ್ದು, ಆರೋಪಿ ಮತ್ತು ಅವರ ಸಹೋದರನ ಜಮೀನು ಖರಿದಿ ಮಾಡಿದ್ದು ಆ ಕುರಿತು ನಮಗೆ ಪರಿಚಯ ಇರುತ್ತಾರೆ. ಈ ವಿಷಯವನ್ನು ನಾನು ನನ್ನ ದೂರಿನಲ್ಲಿ ಆಗಲಿ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಆಗಲಿ ಹೇಳಿರುವುದಿಲ್ಲ ಅಂದರೆ ಸರಿಯಲ್ಲ.

2. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಆದರೆ ನಮ್ಮ ಕುಟುಂಬದವರ ಹೆಸರಿನಲ್ಲಿ 85 ಎಕರೆ ಜಮೀನು ಇದೆ. ನನ್ನ ಹೆಂಡತಿ, ಮಕ್ಕಳು ಮತ್ತು ತಂದೆಯ ಹೆಸರಿನಲ್ಲಿ ಒಟ್ಟು 85 ಎಕರೆ ಇದೆ. ಆರೋಪಿತನ ಹೋದರ ವೆಂಕಟೇಶ ಮತ್ತು ನನ್ನ ಮಧ್ಯ 2014 ನೇ ಸಾಲಿನಲ್ಲಿ ಜಮೀನುಗಳು ವ್ಯವಹಾರದ ಬಗ್ಗೆ ನೊಂದಣಿವಲ್ಲದ ಲಿಜ್ ಪತ್ರ ಆಗಿತ್ತು ಅಂದರೆ ಸರಿ. ನಮ್ಮ ಕುಟುಂಬಕ್ಕೆ 85 ಎಕರೆ ಜಮೀನು ಹೊರತು ಪಡಿಸಿ ಬೇರೆ ಜಮೀನು ಇಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಾಗಬಾವಿ ಕ್ಯಾಂಪಿನ ಹತ್ತಿರ 65 ಜಮೀನುಗಳು ಇರುತ್ತವೆ ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ಮದರಕಿ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಇರುವ ಒಟ್ಟು ಜಮೀನನ್ನು ಆರೋಪಿತನ ಸಹೋದರ ವೆಂಕಟೇಶ ಲಿಜಿಗೆ ಪಡೆದಿರುತ್ತಾನೆ ಅಂದರೆ ಸಾಕ್ಷಿ ಸುಮಾರು 70 ರಿಂದ 72 ಎಕರೆ ಜಮೀನನ್ನು ಲಿಜಿಗೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಮದರಕಿ ಗ್ರಾಮದಲ್ಲಿರುವ ನಮ್ಮ ಜಮೀನು ವರ್ಷದಲ್ಲಿ ಎರಡು ಸಲ ಭತ್ತದ ಬೆಳೆ ಬೆಳೆಯುತ್ತವೆ ಅಂದರೆ ಸರಿ.

3. ನಾನು ಸ್ವಂತ ಸಾಗುವಳಿ ಯಾವುದೇ ಜಮೀನಿನಲ್ಲಿ ಮಾಡುವುದಿಲ್ಲ ಅಂದರೆ ಸರಿಯಲ್ಲ. ನಾನು ವ್ಯವಸಾಯ ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ ಅಂದರೆ ಸರಿ.

4. ನಾನು ಆದಾಯ ತೆರಿಗೆ ಕಟ್ಟುತ್ತೇನೆ. ಸುಮಾರು 8-9 ವರ್ಷಗಳಿಂದ ನಾನು ಆದಾಯ ತೆರಿಗೆ ಕಟ್ಟುತ್ತಾ ಬಂದಿರುತ್ತೇನೆ. ವಾರ್ಷಿಕ ಒಟ್ಟು 30 ರಿಂದ 40 ಸಾವಿರ ನಾನು ಸರಕಾರಕ್ಕೆ ತೆರಿಗೆ ಕಟ್ಟುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ನಾನು ಸುಮಾರು 3-4 ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರುತ್ತೇನೆ.

ಆ ಬಗ್ಗೆ ಪಾಸ ಪುಸ್ತಕಗಳನ್ನು ಹಾಜರು ಪಡಿಸುತ್ತೇನೆ. ನಾನು ಬ್ಯಾಂಕಗಳಲ್ಲಿ 1 ವರೆ ಕೋಟಿ ಸಾಲ ಪಡೆದಿರುತ್ತೇನೆ. ಸುಮಾರು 4 ವರ್ಷಗಳಿಂದ ಬ್ಯಾಂಕಗಳಲ್ಲಿ ಸಾಲ ಪಡೆದಿರುತ್ತೇನೆ. ನಾನು ಬ್ಯಾಂಕಗಳಿಂದ ಸಾಲ ಪಡೆದಿರುವುದನ್ನು ಕಾಲ-ಕಾಲಕ್ಕೆ ಮರುಪಾವತಿ ಮಾಡಿ ವಾಪಸ್ಸು ಪಡೆದಿರುತ್ತೇನೆ. ನಾನು ಬ್ಯಾಂಕುಗಳಲ್ಲಿ ಪಡೆದು ಸಾಲವನ್ನು ಇಂದಿಗೂ ಮರುಪಾವತಿ ಮಾಡಿಲ್ಲ ಅಂದರೆ ಸರಿ. ನಾನು ಬ್ಯಾಂಕಗಳಿಗೆ ಸಾಲವನ್ನು ಮರುಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಬ್ಯಾಂಕಗಳಲ್ಲಿ ಹೊರತು ಪಡಿಸಿ ಖಾಸಗಿ ಸಾಲ ಪಡೆದಿರುತ್ತೇನೆ. ಸುಮಾರು 2 ವರ್ಷಗಳಿಂದ ಖಾಸಗಿ ವ್ಯಕ್ತಿಗಳಿಂದ ಸುಮಾರು 20 ಲಕ್ಷ ಸಾಲವನ್ನು ಪಡೆದಿರುತ್ತೇನೆ. ಆರೋಪಿತನನ್ನು ಹೊರತು ಪಡಿಸಿ ನಾನು ಇತರೆ ವ್ಯಕ್ತಿಗಳಿಗೆ ಸಾಲ ಕೊಟ್ಟಿಲ್ಲ.

5. ನಾವು ಮೂಲತಃ ಆಂಧ್ರದವರು ಆದರೆ ನಾನು ಕರ್ನಾಟಕದಲ್ಲಿ ಹುಟ್ಟಿ-ಬೆಳೆದಿರುತ್ತೇನೆ. ನಮ್ಮ ಕುಟುಂಬಕ್ಕೆ ರೇಶನ್ ಕಾರ್ಡ್, ಆಧಾರ ಕಾರ್ಡ್ ಹಾಗೂ ಇತರೆ ದಾಖಲೆಗಳು ಇವೆ. ಆರೋಪಿತನನ್ನು ಹೊರತು ಪಡಿಸಿ ಸಾಲ ಮರುಪಾವತಿ ಮಾಡುವಂತೆ ಒಬ್ಬ ಮಾನಪ್ಪ ಎಂಬ ವ್ಯಕ್ತಿಗೆ ನೋಟಿಸ್ ನೀಡಿರುತ್ತೇನೆ. ಮಾನಪ್ಪ ಇವರು 5 ಲಕ್ಷ ಕೊಡಬೇಕು ಎಂದು ನೋಟಿಸ್ ನೀಡಿರುತ್ತೇನೆ. ಮಾನಪ್ಪ ಇವರಿಗೆ ಸುಮಾರು 3 ವರ್ಷಗಳ ಹಿಂದೆ ಸಾಲ ನೀಡಿರುತ್ತೇನೆ. ನಾನು ಮತ್ತು ನನ್ನ ಹೆಂಡತಿ ಕೂಡಿಕೊಂಡು ಆರೋಪಿ ಹಾಗೂ ಅವರ ಸಹೋದರ ವೆಂಕಟೇಶ ವಿರುದ್ಧ ಒಟ್ಟು 5 ಪ್ರಕರಣಗಳನ್ನು ದಾಖಲು ಮಾಡಿರುತ್ತೇವೆ. ನನ್ನ ಹೆಂಡತಿ ಹೆಸರಿನಲ್ಲಿ ರೂ.15 ಲಕ್ಷದ 1 ಪ್ರಕರಣ, ನಾನು ಎರಡು ಪ್ರಕರಣಗಳನ್ನು ಅಂದಾಜು 20 ಲಕ್ಷದ ಪ್ರಕರಣಗಳನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ. ಜೇವರಗಿ ನ್ಯಾಯಾಲಯದಲ್ಲಿ 2 ಸಿವಿಲ್ ಪ್ರಕರಣಗಳನ್ನು ಆರೋಪಿ ಹಾಗೂ ಅವರ ಸಹೋದರನ ವಿರುದ್ಧ ಜಮೀನು ಖರೀದಿಸಿದ ವಿಷಯವಾಗಿ ಸಲ್ಲಿಸಿರುತ್ತೇನೆ. ಆರೋಪಿತನ ಸಹೋದರ ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿರುತ್ತಾರೆ, ನಾನು ಸದರಿ ಪ್ರಕರಣದಲ್ಲಿ ಜಾಮೀನು ಪಡೆದಿರುತ್ತೇನೆ. ಆರೋಪಿತನ ಸಹೋದರನಿಗೆ ನಾನು ಹಲ್ಲೆ ಮಾಡಿರುತ್ತೇನೆ ಎಂದು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ನಾನು ಆರೋಪಿತನ ಸಹೋದರನ ವಿರುದ್ಧ  ಅಪಹರಣ ಪ್ರಕರಣ ಭೀಮರಾಯನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಆರೋಪಿತನ ಸಹೋದರ ನನ್ನ ವಿರುದ್ಧ ಸಲ್ಲಿಸಿದ ಕ್ರಿಮಿನಲ್ ಮೊಕದ್ದಮೆ ಯಾವ ಹಂತದಲ್ಲಿ ಇದೆ ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಅವರ ಸಹೋದರ ಹೊರತು ಪಡಿಸಿ ಊರಿನ ಜನರು ಭೀಮರಾಯನಗುಡಿ ಠಾಣೆಯಲ್ಲಿ ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣಗಳಲ್ಲಿ ನಾನು ಜಾಮೀನು ಪಡೆದುಕೊಂಡಿರುತ್ತೇನೆ. ಮಾನಪ್ಪ ಇವರ ವಿರುದ್ಧ ನಾನು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿರುವುದರಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದು ನನ್ನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ.

6. ದಿನಾಂಕ 02.08.2016 ರಂದು ನಾನು ಆರೋಪಿತನಿಗೆ  ಹಣವನ್ನು ಸಂದಾಯ ಮಾಡಿರುತ್ತೇನೆ. ಆರೋಪಿತನು ಖರ್ಚಿಗೆ ಹಣ ಬೇಕಾಗಿದೆ ಅಂತ ಕೇಳಿದ್ದರಿಂದ ಕೊಟ್ಟಿರುತ್ತೇನೆ. ನಾನು ಆ ಬಗ್ಗೆ ದೂರಿನಲ್ಲಿ ಹೇಳಿ ಬರೆಸಿರುತ್ತೇನೆ.

7. ನಮ್ಮ ಕುಟುಂಬದಲ್ಲಿ ನಾನು ಒಬ್ಬನೇ ವ್ಯವಹಾರ ಮಾಡುತ್ತೇನೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ ತಮ್ಮ ಮಾಡುತ್ತಾನೆ. ನಾನು ನಮ್ಮ ತಮ್ಮ ಹೊರತು ಪಡಿಸಿ ಬೇರೆ  ಕುಟುಂಬದ ಸದಸ್ಯರು ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ ಅಂದರೆ ಸಾಕ್ಷಿ ನನ್ನ ತಂದೆ ಸಹ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನಮ್ಮ ತಮ್ಮ ಹೊರತು ಪಡಿಸಿ ನಮ್ಮ ಕುಟುಂಬದಲ್ಲಿ ಬೇರೆ ಯಾರು ಯಾವುದೇ ವ್ಯವಹಾರ ಮಾಡುವುದಿಲ್ಲ ಅಂದರೆ ಸರಿಯಲ್ಲ. ದಿನಾಂಕ 02.08.2016 ರಂದು ಆರೋಪಿ ಹಾಗೂ ಅವರ ಸಹೋದರ ಮತ್ತು ನನ್ನ ಮಧ್ಯ ವ್ಯವಹಾರ ಆಗಿದ್ದು ಆ ಬಗ್ಗೆ ನಾನು ಅಡಮಾನ ಪತ್ರ ಬರೆಸಿಕೊಂಡಿರುತ್ತೇನೆ ನಾನು ಆರೋಪಿತನಿಂದ ಅಡಮಾನ ಪತ್ರ ಬರೆಸಿಕೊಂಡಿರುತ್ತೇನೆ. ರೂ.7 ಲಕ್ಷದ ಭದ್ರತೆ ಕುರಿತು ಅಡಮಾನ ಪತ್ರ ಬರೆಸಿಕೊಂಡಿರುತ್ತೇನೆ. ಅದೇ ದಿನ ಆರೋಪಿತನ ಸಹೋದರ ವೆಂಕಟೇಶ ಇವರಿಗೆ 5 ಲಕ್ಷ ನೀಡಿ ಅಡಮಾನ ಪತ್ರ ಬರೆಸಿಕೊಂಡಿರುತ್ತೇನೆ ಆರೋಪಿತನ ಸಹೋದರನಿಗೆ ರೂ.5 ಲಕ್ಷ ನೀಡಿ ಅಡುಮಾನ ಪತ್ರ ಬರೆಸಿಕೊಂಡ ಬಗ್ಗೆ ನನ್ನ ದೂರಿನಲ್ಲಿ ಹೇಳಿ ಬರೆಸಿಲ್ಲ ಅದನ್ನು ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ ಆ ಬಗ್ಗೆ ಅವಶ್ಯಕತೆ ಇರಲಿಲ್ಲ ಕಾರಣ ಬರೆಸಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಶ್ರೀ ಎಮ್.ಎಮ್.ಆರ್ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದುಡಲಾಯಿತು.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾ.ದಂ.ಗಳು,ಮಾನ್ವಿ**